2018 ಕ.ತೀ.ವ 1100

ಸನ್ಮಾನ್ಯ ನ್ಯಾಯಮೂರ್ತಿ ಡಾ|| ವಿನೀತ್ ಕೊಠಾರಿ

ಎಸ್. ರಾಜೇಂದ್ರನ್ –ವಿರುದ್ಧ– ಕರ್ನಾಟಕ ಸರ್ಕಾರ ಪ್ರಧಾನ ಕಾರ್ಯದರ್ಶಿಯವರಿಂದ ಪ್ರತಿನಿಧಿತ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಮತ್ತು ಇತರರು*

ಭಾರತ ಸಂವಿಧಾನದ 226 ಹಾಗೂ 227ನೇ ಅನುಚ್ಛೇದಗಳಡಿಯಲ್ಲಿ ರಿಟ್ ಅರ್ಜಿ.

ಈ ಎರಡೂ ರಿಟ್ ಅರ್ಜಿಯನ್ನು ಶ್ರೀ ಎನ್. ರಾಜೇಂದ್ರನ್, ಮಾಜಿ ಸದಸ್ಯರು, ವಿಧಾನಸಭೆ ಮತ್ತು ಶ್ರೀ ಕೋದಂಡರಾಮಯ್ಯ, ನಿವೃತ್ತ ಐಪಿಎಸ್ ಅಧಿಕಾರಿ ಮತ್ತು ಮಾಜಿ ಲೋಕಸಭಾ ಸದಸ್ಯರು ದಾಖಲಿಸಿರುವರು, ರಿಟ್ ಅರ್ಜಿಯನ್ನು ಪ್ರತ್ಯರ್ಜಿದಾರರು ಶ್ರೀಯುತರಾದ ವಿ.ಎಸ್. ಉಗ್ರಪ್ಪ, ಶ್ರೀ ಕೆ. ಅಬ್ದುಲ್, ಡಾ|| ಜಯಮಾಲಾ ರಾಮಚಂದ್ರನ್, ಶ್ರೀ ಐ.ಎನ್. ಡಿಸೋಜ ಮತ್ತು ಶ್ರೀ ಇಕ್ಬಾಲ್ ಅಹ್ಮದ್ ಸರಡಗಿಯವರು ಭಾರತ ಸಂವಿಧಾನದ 171 (5) ಅನುಚ್ಛೇದದ ಉಪಬಂಧಗಳ ಅಡಿಯಲ್ಲಿ ರಾಜ್ಯದ ವಿಧಾನಪರಿಷತ್ತಿಗೆ ರಾಜ್ಯಪಾಲರು ನಾಮನಿರ್ದೇಶನ ಮಾಡಿರುವುದನ್ನು ಪ್ರಶ್ನಿಸಿ ಸಲ್ಲಿಸಿದ ರಿಟ್ ಅರ್ಜಿಯಾಗಿದೆ.

ರಿಟ್ ಅರ್ಜಿಯಲ್ಲಿ ಮಾಡಲಾದ ದೃಢೋಕ್ತಿಗಳನ್ನು ಅವಲೋಕಿಸಿದ ಮೇಲೆ ಪ್ರತ್ಯರ್ಜಿದಾರರು ಆಕ್ಷೇಪಣೆಗಳ ಹೇಳಿಕೆಯನ್ನು ದಾಖಲಿಸಿರುವರು ಮತ್ತು ಈ ನ್ಯಾಯಾಲಯ ವಸ್ತು ವಿಷಯವನ್ನು ಸಂಕ್ಷಿಪ್ತ ಸುನಾವಣೆ ನಡೆಸಿದ ತರುವಾಯ ಪ್ರಸ್ತುತ ಅರ್ಜಿಯಲ್ಲಿನ ವಸ್ತುವಿಷಯದ ಮೇಲೆ ಈ ನ್ಯಾಯಾಲಯವು ಯಾವುದೇ ಹಸ್ತಕ್ಷೇಪ ಮಾಡುವುದು ಅಗತ್ಯವಿರುವುದಿಲ್ಲ ಮತ್ತು ಹಾಗೇ ಹಸ್ತಕ್ಷೇಪ ಮಾಡುವುದು ಊರ್ಜಿತಯೋಗ್ಯವಾಗಿಯೂ ಇರುವುದಿಲ್ಲ ಎಂಬುದು ಈ ನ್ಯಾಯಾಲಯದ ಅಭಿಪ್ರಾಯವಾಗಿರುತ್ತದೆ.

*ರಿಟ್ ಅರ್ಜಿ ಸಂ. 32141/2014, ಇದರೊಂದಿಗೆ ಇತರೆ ದಿನಾಂಕ 31ನೇ ಜುಲೈ, 2017.

ಮೊದಲನೆಯದಾಗಿ, ಭಾರತ ಸಂವಿಧಾನದ 163(3)ನೇ ಅನುಚ್ಛೇದವು ರಾಜ್ಯಪಾಲರು ಮಾಡುವ ಅಂಥ ನಾಮ ನಿರ್ದೇಶನವನ್ನು ಅವರ ಮುಂದೆ ಇರುವ ವಸ್ತುವಿಷಯದೊಳಗೆ ಯಾವುದೇ ರೀತಿಯಂಥ ವಿಚಾರಣೆ ಮಾಡುವ ಅಧಿಕಾರ ವ್ಯಾಪ್ತಿಯನ್ನು ಅದು ನಿರ್ಬಂಧಿಸಿದೆ. ಭಾರತ ಸಂವಿಧಾನದ 163(2)ನೇ ಅನುಬಂಧ'ದಲ್ಲಿ ನಿರ್ದಿಷ್ಟಪಡಿಸಿರುವಂತೆ ನಾಮ ನಿರ್ದೇಶನವು ರಾಜ್ಯಪಾಲರ ವಿವೇಚನೆಯಾಗಿರತಕ್ಕದ್ದು ಮತ್ತು ಅವರ ವಿವೇಚನೆಯೇ ಅಂತಿಮವಾಗಿರತಕ್ಕದ್ದು ಮತ್ತು ರಾಜ್ಯಪಾಲರು ಈ ಸಂಬಂಧದಲ್ಲಿ ಮಾಡುವ ಯಾವುದೇ ಸಿಂಧುತ್ವದ ಕಾರಣಗಳ ಮೇಲೆ ಅವರ ಕರ್ತವ್ಯವನ್ನು ಅಥವಾ ಅವರು ಮಾಡಿದ ವಿವೇಚನೆಯು ಸಮರ್ಪಕವಾಗಿಲ್ಲವೆಂದು ಪ್ರಶ್ನೆ ಮಾಡತಕ್ಕದ್ದಲ್ಲ ಎಂದು ಸ್ಪಷ್ಟವಾಗಿ ನಿರೂಪಿಸಲಾಗಿದೆ. 163ನೇ ಅನುಚ್ಛೇದದ (3)ನೇ ಉಪಖಂಡದಲ್ಲಿ, ಅಂಥ ವಿವೇಚನೆಯನ್ನು ಚಲಾಯಿಸುವುದಕ್ಕಾಗಿ ರಾಜ್ಯಪಾಲರಿಗೆ ಮಂತ್ರಿ ಮಂಡಲವು ನೀಡಿದ ಸಲಹೆಗಳನ್ನು ವಿಚಾರಣೆ ಮಾಡುವುದಕ್ಕೆ ನ್ಯಾಯಾಲಯಕ್ಕೂ ಅವಕಾಶವಿರತಕ್ಕದ್ದಲ್ಲ. ಸದರಿ ಅನುಚ್ಛೇದದ ಅಡಿಯಲ್ಲಿ ಮಂತ್ರಿಮಂಡಲ ಸಲಹೆಯ ಮೇಲೆ ಅದರಂತೆ ರಾಜ್ಯಪಾಲರು ತಮ್ಮ ಕರ್ತವ್ಯವನ್ನು ನಿರ್ವಹಿಸತಕ್ಕದ್ದು.

ಪ್ರಸ್ತುತ ರಿಟ್ ಅರ್ಜಿಯಲ್ಲಿ ಎತ್ತಲಾದ ಆಪಾದನೆಗಳು ಮತ್ತು ಕಾರಣಗಳು, ಮೇಲೆ ಹೇಳಲಾದ ನಾಮ ನಿರ್ದೇಶಿತ ಸದಸ್ಯರು ಹೊಂದಿರುವ ಅರ್ಹತೆ ಅಥವಾ ಪ್ರತ್ಯರ್ಜಿದಾರರ ನೆರವೇರಿಕೆಗಳು ಅಥವಾ ಭಾರತ ಸಂವಿಧಾನದ 171(3) ಅನುಚ್ಛೇದದಲ್ಲಿ ಹೇಳಲಾದ ಮಾನದಂಡಗಳೊಂದಿಗೆ ಅವನ್ನು ಹೋಲಿಕೆ ಮಾಡಿದಾಗ ರಿಟ್ ಅರ್ಜಿಯ ಕಾರಣಗಳು ಅಸ್ಪಷ್ಟವಾಗಿದೆ ಮತ್ತು ಬಹಳ ಸಂದಿಗ್ಧತೆಯಿಂದ ಕೂಡಿದೆ ಎಂಬುದು ಕಂಡು ಬರುತ್ತದೆ.

ಪ್ರಸ್ತುತ ರಿಟ್ ಅರ್ಜಿದಾರರು ತಮ್ಮ ವೈಯಕ್ತಿಕ ಮತ್ತು ರಾಜಕೀಯ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳುವುದಕ್ಕಾಗಿ ಸಲ್ಲಿಸಿದ ಅರ್ಜಿಗಳಾಗಿದೆ ಎಂದು ಈ ನ್ಯಾಯಾಲಯ ಅಭಿಪ್ರಾಯಪಡುತ್ತದೆ ಮತ್ತು ಅರ್ಜಿದಾರರು ಈ ಸಂಬಂಧದಲ್ಲಿ ವಿಚಾರಣೆ ಮಾಡುವುದಕ್ಕಾಗಿ ಮಾತ್ರವೇ ಕೋರಿರದೇ ಈ ನ್ಯಾಯಾಲಯ ಹೊಂದಿರುವ ವಿಶೇಷ ಅಧಿಕಾರ ವ್ಯಾಪ್ತಿಯ ಮೂಲಕ ಬಗೆಹರಿಸಲು ಕೋರಿರುತ್ತಾರೆ. ಇದು ಸಂವಿಧಾನಾತ್ಮಕವಾಗಿ ನಿಷೇಧವಾಗಿರುವುದು ಅಲ್ಲದೇ ಈ ನ್ಯಾಯಾಲಯಕ್ಕೆ ಇದು

**ಅಪರಿಚಿತವಾದ ಕ್ಷೇತ್ರದ ದಾವೆಯಾಗಿದೆ ಮತ್ತು ಭಾರತ ಸಂವಿಧಾನದ 171(5) ಅನುಚ್ಛೇದದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಕ್ಷೇತ್ರಗಳ ಪರಿಮಿತಿಯ ವ್ಯಾಪ್ತಿಯೊಳಗೆ ವಿಚಾರಣೆ ಮಾಡುವುದನ್ನು ಈ ನ್ಯಾಯಾಲಯಕ್ಕೆ ಪ್ರತಿರೋಧಿಸುವ ಸ್ವರೂಪದಲ್ಲಿ ಇರತಕ್ಕದ್ದು.**

**ಆದುದರಿಂದ, ಈ ನ್ಯಾಯಾಲಯದ ಅಭಿಪ್ರಾಯದಲ್ಲಿ ಪ್ರಸ್ತುತ ರಿಟ್ ಅರ್ಜಿಗಳ ಫಲಪ್ರದವಾಗಿಲ್ಲದಿರುವುದನ್ನು ಪರಿಗಣಿಸಿ ತದನುಸಾರವಾಗಿ ವಜಾಗೊಳ್ಳಲು ಅರ್ಹವಾದ ರಿಟ್ ಅರ್ಜಿಗಳಾಗಿದೆ.**

**ರಿಟ್ ಅರ್ಜಿಗಳನ್ನು ತದನುಸಾರವಾಗಿ ವಜಾ ಮಾಡಲಾಗಿದೆ. ಯಾವುದೇ ವೆಚ್ಚಗಳು ಇರುವುದಿಲ್ಲ.**

ಅರ್ಜಿದಾರರ ಪರ: ಶ್ರೀ ಎಸ್. ಬಸವರಾಜು, ಮತ್ತು ಶ್ರೀ ರಿಯುಬೇನ್ ಜೇಕಬ್, ವಕೀಲರು.
ಪ್ರತ್ಯರ್ಜಿದಾರರ ಪರ: ಶ್ರೀ ಎ.ಜಿ. ಶಿವಣ್ಣ, ಅಡಿಷನಲ್ ಅಡ್ವೋಕೇಟ್ ಜನರಲ್, ಇವರೊಂದಿಗೆ ಶ್ರೀ ಟಿ.ಎಲ್. ಕಿರಣ್ ಕುಮಾರ್, ಎಜಿಎ, ಶ್ರೀ ಕೆ. ಕೃಷ್ಣ, ಶ್ರೀ ಡಿ.ಆರ್. ಆನಂದೀಶ್ವರ, ಶ್ರೀ ಎ. ನಾಗರಾಜಪ್ಪ, ಶ್ರೀ ಹೆಚ್.ಡಿ. ಅಮರನಾಥ್, ಶ್ರೀ ಬಿ.ಎಂ. ಅರುಣ್, ಶ್ರೀ ಹೆಚ್.ಎಸ್. ಚಂದ್ರಮೌಳಿ, ಶ್ರೀ ಕೃಷ್ಣಮೂರ್ತಿ ಡಿ, ಶ್ರೀ ಹೆಚ್.ಎಂ. ಸಿದ್ಧಾರ್ಥ, ವಕೀಲರು.

**ಆದೇಶ**

**ನ್ಯಾಯಮೂರ್ತಿ ಡಾ॥ ವಿನೀತ್ ಕೊಠಾರಿ:**

ಈ ಎರಡೂ ರಿಟ್ ಅರ್ಜಿಯನ್ನು ಶ್ರೀ ಎನ್. ರಾಜೇಂದ್ರನ್, ಮಾಜಿ ಸದಸ್ಯರು, ವಿಧಾನಸಭೆ ಮತ್ತು ಶ್ರೀ ಕೋದಂಡರಾಮಯ್ಯ, ನಿವೃತ್ತ ಐಪಿಎಸ್ ಅಧಿಕಾರಿ ಮತ್ತು ಮಾಜಿ ಲೋಕಸಭಾ ಸದಸ್ಯರು ದಾಖಲಿಸಿರುವರು, ರಿಟ್

ಅರ್ಜಿಯುನ್ನು ಪ್ರತ್ಯರ್ಜಿದಾರರು ಶ್ರೀಯುತರಾದ ವಿ.ಎಸ್. ಉಗ್ರಪ್ಪ, ಶ್ರೀ ಕೆ. ಅಬ್ದುಲ್, ಡಾ|| ಜಯಮಾಲಾ ರಾಮಚಂದ್ರನ್, ಶ್ರೀ ಐ.ಎನ್. ಡಿಸೋಜ ಮತ್ತು ಶ್ರೀ ಇಕ್ಬಾಲ್ ಅಹ್ಮದ್ ಸರಡಗಿಯವರು ಭಾರತ ಸಂವಿಧಾನದ 171 (5) ಅನುಚ್ಛೇದದ ಉಪಬಂಧಗಳ ಅಡಿಯಲ್ಲಿ ರಾಜ್ಯದ ವಿಧಾನಪರಿಷತ್ತಿಗೆ ರಾಜ್ಯಪಾಲರು ನಾಮನಿರ್ದೇಶನ ಮಾಡಿರುವುದನ್ನು ಪ್ರಶ್ನಿಸಿ ಸಲ್ಲಿಸಿದ ರಿಟ್ ಅರ್ಜಿಯಾಗಿದೆ.

2. ಎರಡೂ ರಿಟ್ ಅರ್ಜಿಗಳಲ್ಲಿ ಅರ್ಜಿದಾರರು ಭಾರತದ ಸಂವಿಧಾನದ 171(5)ನೇ ಅನುಚ್ಛೇದದ ಅಡಿಯಲ್ಲಿ ಪರಿಭಾಷಿಸಿದ ಮಾನದಂಡ ಮತ್ತು ಅರ್ಹತೆಗಳನ್ನು ತೃಪ್ತಿಕರವಾಗಿ ಹೊಂದಿರದ ಸದಸ್ಯರುಗಳನ್ನು ಪ್ರತ್ಯರ್ಜಿದಾರರು ವಿಧಾನಪರಿಷತ್ತಿಗೆ ನಾಮ ನಿರ್ದೇಶನ ಮಾಡಿರುವ ಬಗ್ಗೆ ಪ್ರಶ್ನಿಸಿರುವರು. ರಿಟ್ ಅರ್ಜಿ ಸಂಖ್ಯೆ: 32141/2014ರ 5ನೇ ಪ್ಯಾರಾಗ್ರಾಫ್‌ನಲ್ಲಿ ವಿಧಾನ ಪರಿಷತ್ತಿನ ಹಿಂದಿನ ನಿಬಂಧನೆಗಳ ಹೋಲಿಕೆ ಮಾಡಿ ಅರ್ಜಿದಾರರು ಕೆಲವೊಂದು ಹೆಸರುಗಳೊಂದಿಗೆ ಅವರ ಸಾಂಸ್ಕೃತಿಕ ಮತ್ತು ಸಾಕ್ಷರತೆ ಹಿನ್ನೆಲೆಯನ್ನು ನೀಡಿರುವರು ಮತ್ತು ಭಾರತ ಸಂವಿಧಾನದ 171ನೇ ಅನುಚ್ಛೇದದ ಅಡಿಯಲ್ಲಿ ರಾಜ್ಯದ ರಾಜ್ಯಪಾಲರು ನಾಮನಿರ್ದೇಶನ ಮಾಡಿದ ಪ್ರಸ್ತುತ ಪ್ರತ್ಯರ್ಜಿದಾರರು ನಾಮನಿರ್ದೇಶಿಸಿದ್ದ ನಾಮನಿರ್ದೇಶಿತರು ಆ ಯಾವುದೇ ಸಾಂಸ್ಕೃತಿಕ ಮತ್ತು ಸಾಹಿತ್ಯ ಹಿನ್ನೆಲೆಯನ್ನು ಮತ್ತು ಅಂಥ ಅರ್ಹತೆಯನ್ನು ಹೊಂದಿಲ್ಲ ಮತ್ತು ನಾಮ ನಿರ್ದೇಶನಗೊಂಡ ಸದಸ್ಯರೆಲ್ಲರು ರಾಜಕೀಯ ಪಕ್ಷಕ್ಕೆ ಸೇರಿದವರಾಗಿರುವರು. ವಿಧಾನ ಪರಿಷತ್ತಿಗೆ ಅವರೆಲ್ಲರನ್ನು ನಾಮ ನಿರ್ದೇಶನ ಮಾಡಿರುವುದು ಸರಿಯಾದುದಲ್ಲ ಎಂದು ರಿಟ್ ಅರ್ಜಿಯಲ್ಲಿ ನಿವೇದಿಸಿರುವರು. ರಾಜ್ಯ ವಿಧಾನಮಂಡಲದ ಮೇಲ್ಮನೆಯೂ, ರಾಜ್ಯದ ಚಿಂತಕರ ಚಾವಡಿಯಾಗಬೇಕಾಗಿರುವುದರಿಂದ ಮೇಲ್ಮನೆಗೆ ನಾಮನಿರ್ದೇಶನಗೊಳ್ಳುವ ವ್ಯಕ್ತಿಗಳು ಕಲೆ, ಸಂಸ್ಕೃತಿ, ಸಾಮಾಜಿಕ ಸೇವೆ ಮತ್ತು ಸಾಹಿತ್ಯ ಮುಂತಾದ ಕ್ಷೇತ್ರಗಳಲ್ಲಿ ಹಿರಿದಾದ ಹೆಸರನ್ನು ಹೊಂದಿರುವ ವ್ಯಕ್ತಿಗಳನ್ನು ಮಾತ್ರವೇ ಇದುವರೆವಿಗೂ ಮೇಲ್ಮನೆಗೆ ನಾಮ ನಿರ್ದೇಶನ ಮಾಡಲು ಅರ್ಹತೆಯ ಮಾನದಂಡವನ್ನು ಪರಿಗಣಿಸಲಾಗುತ್ತಿತ್ತು ಎಂದು ರಿಟ್ ಅರ್ಜಿಯಲ್ಲಿ ನಿವೇದಿಸಿರುವರು.

3. ಮತ್ತೊಂದು ಕಡೆಯಲ್ಲಿ, ಪ್ರತ್ಯರ್ಜಿದಾರರ ಪರವಾಗಿ ಹಾಜರಾಗಿರುವ ಶ್ರೀ ಎ.ಜಿ. ಶಿವಣ್ಣ, ಅಡಿಷನಲ್ ಅಡ್ವಕೇಟ್ ಜನರಲ್ ಮತ್ತು ಇತರ ಮಾನ್ಯ

ನ್ಯಾಯವಾದಿಗಳು ಪ್ರಸ್ತುತ ರಿಟ್ ಅರ್ಜಿದಾರರಿಗೆ ಎತ್ತಿರುವ ವಾದಕ್ಕೆ ಭಾರತ ಸಂವಿಧಾನದ 163ನೇ ಅನುಚ್ಛೇದವನ್ನು ಉಲ್ಲೇಖಿಸಿ ಪ್ರಾರಂಭಿಕ ಆಕ್ಷೇಪ ಬಗೆಗಿನ ವಿಷಯವನ್ನು ಸಮರ್ಥಿಸಿರುವರು. ಮಾನ್ಯ ಅಡಿಷನಲ್ ಅಡ್ವಕೇಟ್ ಜನರಲ್ ಈ ನ್ಯಾಯಾಲಯದ ಮುಂದೆ ಭಾರತ ಸಂವಿಧಾನದ 171(3) ಅನುಚ್ಛೇದದ ಪ್ರಕಾರದಂತೆ ರಾಜ್ಯದ ವಿಧಾನ ಪರಿಷತ್ತಿನಲ್ಲಿ ನಿಯಮಿಸಿದ ಒಟ್ಟು ಸಂಖ್ಯೆಯ ಸದಸ್ಯರಲ್ಲಿ ನಿರ್ದಿಷ್ಟಪಡಿಸಿದ ಉಳಿಕೆ ಸದಸ್ಯರನ್ನು ನಾಮ ನಿರ್ದೇಶನ ಮಾಡುವುದಕ್ಕೆ ರಾಜ್ಯದ ರಾಜ್ಯಪಾಲರ ವಿವೇಚನಾತ್ಮಕ ಅಧಿಕಾರವನ್ನು ಹೊಂದಿರುವರು ಮತ್ತು ಅನುಚ್ಛೇದದ (ಸಿ)ಖಂಡದಲ್ಲಿ, (5)ನೇ ಖಂಡದ ಪ್ರಕಾರದಂತೆ ಅಂಥ ಸಂಖ್ಯೆಯ ಸದಸ್ಯರನ್ನು ನಾಮನಿರ್ದೇಶನ ಮಾಡುವುದಕ್ಕೆ ರಾಜ್ಯದ ರಾಜ್ಯಪಾಲರಿಗೆ ವಿವೇಚಾನಾತ್ಮಕ ಅಧಿಕಾರವನ್ನು ಕೊಡಲಾಗಿದೆ. ಅದರಂತೆ ಭಾರತ ಸಂವಿಧಾನದ 171ನೇ ಅನುಚ್ಛೇದದ 3(ಇ) ಖಂಡದ ಅಡಿಯಲ್ಲಿ ಗೊತ್ತುಪಡಿಸಿದಂಥ ವ್ಯಕ್ತಿಗಳನ್ನು ನಾಮನಿರ್ದೇಶನ ಮಾಡಲಾಗಿದೆ. ನಾಮ ನಿರ್ದೇಶನಗೊಳ್ಳುವ ವ್ಯಕ್ತಿಗಳು ವಿಜ್ಞಾನ, ಕಲೆ, ಸಾಹಿತ್ಯ, ಸಹಕಾರಿ ಚಳುವಳಿ ಮತ್ತು ಸಾಮಾಜಿಕ ಸೇವೆಯಂತ ಕ್ಷೇತ್ರಗಳಲ್ಲಿ ವಿಶೇಷವಾದ ಜ್ಞಾನವನ್ನು ಮತ್ತು ಪ್ರಾಯೋಗಿಕ ಅನುಭವವನ್ನು ಪಡೆದಂತಹ ಅರ್ಹತೆಯನ್ನು ಹೊಂದಿರತಕ್ಕದ್ದು ಎಂದು ನಿರೂಪಿಸಲಾಗಿದೆ. ಆದುದರಿಂದ ಮಾನ್ಯ ನ್ಯಾಯವಾದಿಗಳು ಊರ್ಜಿತಯೋಗ್ಯವಲ್ಲದ ರಿಟ್ ಅರ್ಜಿಯನ್ನು ಈ ಕೂಡಲೇ / ಪ್ರಾರಂಭದಲ್ಲಿಯೇ ವಜಾ ಮಾಡುವುದಕ್ಕೆ ಅರ್ಹವಾದ ರಿಟ್ ಅರ್ಜಿಯಾಗಿದೆ ಎಂದು ನಿವೇದಿಸಿರುವರು.

4. ಭಾರತ ಸಂವಿಧಾನದ ಸುಸಂಗತವಾದ 163ನೇ ಅನುಚ್ಛೇದ ಮತ್ತು 171ನೇ ಅನುಚ್ಛೇದವನ್ನು ಪರಾಮರ್ಶೆಗಾಗಿ ಈ ಕೆಳಗೆ ಉಲ್ಲೇಖಿಸಲಾಗಿದೆ:

> ***"163. ರಾಜ್ಯಪಾಲನಿಗೆ ನೆರವು ಮತ್ತು ಸಲಹೆ ನೀಡಲು ಮಂತ್ರಿಮಂಡಲ:–***
> *(1) ಈ ಸಂವಿಧಾನದ ಮೂಲಕ ಅಥವಾ ಅದರ ಮೇರೆಗೆ ರಾಜ್ಯಪಾಲನು, ತನ್ನ ಎಲ್ಲ ಪ್ರಕಾರ್ಯಗಳನ್ನು ಅಥವಾ ಅವುಗಳಲ್ಲಿ ಯಾವುದೇ ಪ್ರಕಾರ್ಯವನ್ನು ತನ್ನ ವಿವೇಚನಾನುಸಾರ ಚಲಾಯಿಸಲು*

ಅವನನ್ನು ಅಗತ್ಯಪಡಿಸಿರುವಷ್ಟರ ಮಟ್ಟಿಗೆ ಹೊರತು, ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಅವನಿಗೆ ನೆರವು ಮತ್ತು ಸಲಹೆಯನ್ನು ನೀಡಲು ಮುಖ್ಯಮಂತ್ರಿಯ ನೇತೃತ್ವದಲ್ಲಿ ಒಂದು ಮಂತ್ರಿಮಂಡಲ ಇರತಕ್ಕದ್ದು.

(2) ಯಾವುದೇ ವಿಷಯವು ಈ ಸಂವಿಧಾನದ ಮೂಲಕ ಅಥವಾ ಅದರ ಮೇರೆಗೆ ರಾಜ್ಯಪಾಲನು ತನ್ನ ವಿವೇಚನಾನುಸಾರ ಕಾರ್ಯ ನಿರ್ವಹಿಸಬೇಕೆಂದು ಅವನನ್ನು ಅಗತ್ಯಪಡಿಸಿರುವ ವಿಷಯವೇ ಅಥವಾ ಅಲ್ಲವೇ ಎಂಬ ಯಾವುದೇ ಪ್ರಶ್ನೆಯು ಉದ್ಭವಿಸಿದರೆ, ರಾಜ್ಯಪಾಲನು ತನ್ನ ವಿವೇಚನಾನುಸಾರ ಕೈಗೊಂಡ ತೀರ್ಮಾನವೇ ಅಂತಿಮವಾದುದಾಗಿರತಕ್ಕದ್ದು ಮತ್ತು ರಾಜ್ಯಪಾಲನು ಕೈಗೊಂಡ ಯಾವುದೇ ಕಾರ್ಯದ ಸಿಂಧುತ್ವವನ್ನು ಅವನು ತನ್ನ ವಿವೇಚನಾನುಸಾರವಾಗಿ ಕಾರ್ಯನಿರ್ವಹಿಸಬೇಕಾಗಿತ್ತು ಅಥವಾ ಕಾರ್ಯನಿರ್ವಹಿಸಬಾರದಾಗಿತ್ತು ಎಂಬ ಕಾರಣದ ಮೇಲೆ ಪ್ರಶ್ನಿಸತಕ್ಕದ್ದಲ್ಲ.

(3) ಮಂತ್ರಿಗಳು ರಾಜ್ಯಪಾಲನಿಗೆ ಯಾವುದೇ ಸಲಹೆಯನ್ನು ನೀಡಿದ್ದರೇ ಮತ್ತು ಹಾಗೆ ನೀಡಿದ್ದರೆ ಯಾವ ಸಲಹೆಯನ್ನು ನೀಡಿದ್ದರು ಎಂಬ ಪ್ರಶ್ನೆಯನ್ನು ಕುರಿತು ಯಾವುದೇ ನ್ಯಾಯಾಲಯವು ವಿಚಾರಣೆ ಮಾಡತಕ್ಕದ್ದಲ್ಲ.

**171. ವಿಧಾನ ಪರಿಷತ್ತುಗಳ ಸಂರಚನೆ:–** (1) ವಿಧಾನಪರಿಷತ್ತು ಇರುವ ರಾಜ್ಯದಲ್ಲಿ ವಿಧಾನ ಪರಿಷತ್ತಿನ ಸದಸ್ಯರ ಒಟ್ಟು ಸಂಖ್ಯೆಯು, ಆ ರಾಜ್ಯದ ವಿಧಾನಸಭೆಯ ಸದಸ್ಯರ ಒಟ್ಟು ಸಂಖ್ಯೆಯ 4 [ಮೂರನೆಯ ಒಂದು ಭಾಗವನ್ನು] ಮೀರತಕ್ಕದ್ದಲ್ಲ: ಪರಂತು, ಒಂದು ರಾಜ್ಯದ ವಿಧಾನಪರಿಷತ್ತಿನ ಸದಸ್ಯರ ಒಟ್ಟು ಸಂಖ್ಯೆಯು ಯಾವುದೇ ಸಂದರ್ಭದಲ್ಲಿ ನಲವತ್ತಕ್ಕಿಂತಲೂ ಕಡಿಮೆಯಾಗಿರತಕ್ಕದ್ದಲ್ಲ.

*(2) ಸಂಸತ್ತು ಕಾನೂನಿನ ಮೂಲಕ ಅನ್ಯಥಾ ಉಪಬಂಧಿಸುವವರೆಗೆ, ಒಂದು ರಾಜ್ಯದ ವಿಧಾನಪರಿಷತ್ತಿನ ರಚನೆಯು (3)ನೆಯ ಖಂಡದಲ್ಲಿ ಉಪಬಂಧಿಸಿರುವಂತೆ ಇರತಕ್ಕದ್ದು.*

*(3) ಒಂದು ರಾಜ್ಯದ ವಿಧಾನಪರಿಷತ್ತಿನ ಸದಸ್ಯರ ಒಟ್ಟು ಸಂಖ್ಯೆಯಲ್ಲಿ,- (ಎ)ಆದಷ್ಟು ಮಟ್ಟಿಗೆ ಮೂರನೆಯ ಒಂದು ಭಾಗದಷ್ಟು ಸದಸ್ಯರು ಆ ರಾಜ್ಯದಲ್ಲಿನ ಪೌರಸಭೆಗಳ, ಜಿಲ್ಲಾ ಮಂಡಲಿಗಳ ಮತ್ತು ಸಂಸತ್ತು ಕಾನೂನಿನ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ಸ್ಥಳೀಯ ಪ್ರಾಧಿಕಾರಗಳ ಸದಸ್ಯರನ್ನು ಒಳಗೊಂಡಿರುವ ಮತದಾರರ ಗಣಗಳಿಂದ ಚುನಾಯಿತರಾಗತಕ್ಕದ್ದು;*

*(ಬಿ) ಆದಷ್ಟುಮಟ್ಟಿಗೆ ಹನ್ನೆರಡನೆಯ ಒಂದು ಭಾಗದಷ್ಟು ಸದಸ್ಯರು ಭಾರತದ ರಾಜ್ಯಕ್ಷೇತ್ರದಲ್ಲಿನ ಯಾವುದೇ ವಿಶ್ವವಿದ್ಯಾನಿಲಯದ ಪದವೀಧರರಾಗಿ ಕನಿಷ್ಠ ಪಕ್ಷ ಮೂರು ವರ್ಷಗಳಾದರೂ ಆಗಿರುವ ಅಥವಾ ಅಂಥ ಯಾವುದೇ ವಿಶ್ವವಿದ್ಯಾನಿಲಯದ ಪದವೀಧರನಿಗೆ ಸಮಾನವಾದ ಅರ್ಹತೆಗಳೆಂದು ಸಂಸತ್ತು ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ನಿಯಮಿಸಿದ ಅರ್ಹತೆಗಳನ್ನು ಪಡೆದು ಕನಿಷ್ಠಪಕ್ಷ ಮೂರು ವರ್ಷಗಳಾದರೂ ಆಗಿರುವ ಮತ್ತು ಆ ರಾಜ್ಯದಲ್ಲಿ ವಾಸಿಸುತ್ತಿರುವ ವ್ಯಕ್ತಿಗಳನ್ನು ಒಳಗೊಂಡಿರುವ ಮತದಾರರ ಗಣಗಳಿಂದ ಚುನಾಯಿತರಾಗತಕ್ಕದ್ದು;*

*(ಸಿ) ಆದಷ್ಟು ಮಟ್ಟಿಗೆ ಹನ್ನೆರಡನೆಯ ಒಂದು ಭಾಗದಷ್ಟು ಸದಸ್ಯರು ಸಂಸತ್ತು ಮಾಡಿದ ಯಾವುದೇ ಕಾನೂನಿನ ಮೂಲಕ ಅಥವಾ*

*ಅದರ ಮೇರೆಗೆ ನಿಯಮಿಸಬಹುದಾದಂತೆ ರಾಜ್ಯದಲ್ಲಿನ ಪ್ರೌಢಶಾಲೆಯ ದರ್ಜೆಗೆ ಕಡಿಮೆ ಇಲ್ಲದಂತಹ ದರ್ಜೆಯ ಶಿಕ್ಷಣ ಸಂಸ್ಥೆಗಳಲ್ಲಿ ಕನಿಷ್ಠಪಕ್ಷ ಮೂರು ವರ್ಷಗಳಿಂದಾದರೂ ಬೋಧನೆಯಲ್ಲಿ ತೊಡಗಿರುವ ವ್ಯಕ್ತಿಗಳನ್ನೊಳಗೊಂಡಿರುವ ಮತದಾರರ ಗಣಗಳಿಂದ ಚುನಾಯಿತರಾಗತಕ್ಕದ್ದು;*

*(ಡಿ)ಆದಷ್ಟು ಮಟ್ಟಿಗೆ ಮೂರನೆಯ ಒಂದು ಭಾಗದಷ್ಟು ಸದಸ್ಯರನ್ನು, ಆ ರಾಜ್ಯದ ವಿಧಾನಸಭೆಯ ಸದಸ್ಯರು ಆ ಸಭೆಯ ಸದಸ್ಯರಲ್ಲದ ವ್ಯಕ್ತಿಗಳಿಂದ ಚುನಾಯಿಸತಕ್ಕದ್ದು; (ಇ)ಉಳಿದ ಸದಸ್ಯರು (5)ನೆಯ ಖಂಡದ ಉಪಬಂಧಗಳಿಗೆ ಅನುಸಾರವಾಗಿ ಆ ರಾಜ್ಯದ ರಾಜ್ಯಪಾಲನಿಂದ ನಾಮನಿರ್ದೇಶಿತರಾಗತಕ್ಕದ್ದು. 1. 2001 ನೇ ಇಸವಿಯ ಸಂವಿಧಾನ (ಎಂಬತ್ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 5ನೆಯ ಪ್ರಕರಣದ ಮೂಲಕ ಅನುಕ್ರಮವಾಗಿ "2000ದ" ಮತ್ತು "1971ರ" ಎಂಬ ಅಂಕಿಗಳಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.*

*2. 2001 ನೆಯ ಇಸವಿಯ ಸಂವಿಧಾನ (ಎಂಬತ್ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 5ನೆಯ ಪ್ರಕರಣದ ಮೂಲಕ ಕೆಲವು ಪದಗಳಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.*

*3. 2003ನೇ ಇಸವಿಯ ಸಂವಿಧಾನ (ಎಂಬತ್ತೇಳನೆಯ ತಿದ್ದುಪಡಿ) ಅಧಿನಿಯಮದ 4ನೇ ಪ್ರಕರಣದ ಮೂಲಕ "1991ರ" ಎಂಬ ಅಂಕಿಗಳಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.*

*4. 1956ನೇ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 10ನೆಯ ಪ್ರಕರಣದ ಮೇರೆಗೆ "ಕಾಲು ಭಾಗಕ್ಕಿಂತಲೂ" ಎಂಬುದಕ್ಕೆ ಬದಲಾಗಿ (1-11-56ರಿಂದ ಜಾರಿಗೆ*

*ಬರುವಂತೆ) ಪ್ರತ್ಯಾಯೋಜಿಸಲಾಗಿದೆ. (4) (3)ನೆಯ ಖಂಡದ (ಎ), (ಬಿ) ಮತ್ತು (ಸಿ) ಉಪಖಂಡಗಳ ಮೇರೆಗೆ ಚುನಾಯಿತರಾಗಬೇಕಾದ ಸದಸ್ಯರು ಸಂಸತ್ತು ಮಾಡಿದ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ನಿಯಮಿಸಬಹುದಾದಂಥ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳಿಂದ ಆಯ್ಕೆಯಾಗತಕ್ಕದ್ದು ಮತ್ತು ಸದರಿ ಉಪಖಂಡಗಳ ಮೇರೆಗೆ ಮತ್ತು ಸದರಿ ಖಂಡದ (ಡಿ) ಉಪಖಂಡದ ಮೇರೆಗೆ ನಡೆಯುವ ಚುನಾವಣೆಗಳು ಪ್ರಮಾಣಾನುಸಾರ ಪ್ರಾತಿನಿಧ್ಯ ಪದ್ಧತಿಗನುಸಾರ ಏಕವರ್ಗಾವಣೀಯ ಮತದ ಮೂಲಕ ನಡೆಯತಕ್ಕದ್ದು.*

*(5) ರಾಜ್ಯಪಾಲನಿಂದ (3)ನೆಯ ಖಂಡದ (ಇ) ಉಪಖಂಡದ ಮೇರೆಗೆ ನಾಮನಿರ್ದೇಶಿತರಾಗಬೇಕಾದ ಸದಸ್ಯರು ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ಎಂದರೆ,– ಸಾಹಿತ್ಯ, ವಿಜ್ಞಾನ, ಕಲೆ, ಸಹಕಾರ ಚಳವಳಿ ಮತ್ತು ಸಮಾಜ ಸೇವೆಗಳಲ್ಲಿ ವಿಶೇಷ ಜ್ಞಾನವನ್ನು ಅಥವಾ ವ್ಯಾವಹಾರಿಕ ಅನುಭವವನ್ನು ಪಡೆದವರಾಗಿರತಕ್ಕದ್ದು.”*

5. ರಿಟ್ ಅರ್ಜಿಯಲ್ಲಿ ಮಾಡಲಾದ ದೃಢೋಕ್ತಿಗಳನ್ನು ಅವಲೋಕಿಸಿದ ಮೇಲೆ ಪ್ರತ್ಯರ್ಜಿದಾರರು ಆಕ್ಷೇಪಣೆಗಳ ಹೇಳಿಕೆಯನ್ನು ದಾಖಲಿಸಿರುವರು ಮತ್ತು ಈ ನ್ಯಾಯಾಲಯ ವಸ್ತು ವಿಷಯವನ್ನು ಸಂಕ್ಷಿಪ್ತ ಸುನಾವಣೆ ನಡೆಸಿದ ತರುವಾಯ ಪ್ರಸ್ತುತ ಅರ್ಜಿಯಲ್ಲಿನ ವಸ್ತುವಿಷಯದ ಮೇಲೆ ಈ ನ್ಯಾಯಾಲಯವು ಯಾವುದೇ ಹಸ್ತಕ್ಷೇಪ ಮಾಡುವುದು ಅಗತ್ಯವಿರುವುದಿಲ್ಲ ಮತ್ತು ಹಾಗೇ ಹಸ್ತಕ್ಷೇಪ ಮಾಡುವುದು ಊರ್ಜಿತಯೋಗ್ಯವಾಗಿಯೂ ಇರುವುದಿಲ್ಲ ಎಂಬುದು ಈ ನ್ಯಾಯಾಲಯದ ಅಭಿಪ್ರಾಯವಾಗಿರುತ್ತದೆ.

6. ಮೊದಲನೆಯದಾಗಿ, ಭಾರತ ಸಂವಿಧಾನದ 163(3)ನೇ ಅನುಚ್ಛೇದವು ರಾಜ್ಯಪಾಲರು ಮಾಡುವ ಅಂಥ ನಾಮ ನಿರ್ದೇಶನವನ್ನು ಅವರ ಮುಂದೆ

ಇರುವ ವಸ್ತುವಿಷಯದೊಳಗೆ ಯಾವುದೇ ರೀತಿಯಂಥ ವಿಚಾರಣೆ ಮಾಡುವ ಅಧಿಕಾರ ವ್ಯಾಪ್ತಿಯನ್ನು ಅದು ನಿರ್ಬಂಧಿಸಿದೆ. ಭಾರತ ಸಂವಿಧಾನದ 163(2)ನೇ ಅನುಬಂಧದಲ್ಲಿ ನಿರ್ದಿಷ್ಟಪಡಿಸಿರುವಂತೆ ನಾಮ ನಿರ್ದೇಶನವು ರಾಜ್ಯಪಾಲರ ವಿವೇಚನೆಯಾಗಿರತಕ್ಕದ್ದು ಮತ್ತು ಅವರ ವಿವೇಚನೆಯೇ ಅಂತಿಮವಾಗಿರತಕ್ಕದ್ದು ಮತ್ತು ರಾಜ್ಯಪಾಲರು ಈ ಸಂಬಂಧದಲ್ಲಿ ಮಾಡುವ ಯಾವುದೇ ಸಿಂಧುತ್ವದ ಕಾರಣಗಳ ಮೇಲೆ ಅವರ ಕರ್ತವ್ಯವನ್ನು ಅಥವಾ ಅವರು ಮಾಡಿದ ವಿವೇಚನೆಯು ಸಮರ್ಪಕವಾಗಿಲ್ಲವೆಂದು ಪ್ರಶ್ನೆ ಮಾಡತಕ್ಕದ್ದಲ್ಲ ಎಂದು ಸ್ಪಷ್ಟವಾಗಿ ನಿರೂಪಿಸಲಾಗಿದೆ. 163ನೇ ಅನುಚ್ಛೇದದ (3)ನೇ ಉಪಖಂಡದಲ್ಲಿ, ಅಂಥ ವಿವೇಚನೆಯನ್ನು ಚಲಾಯಿಸುವುದಕ್ಕಾಗಿ ರಾಜ್ಯಪಾಲರಿಗೆ ಮಂತ್ರಿ ಮಂಡಲವು ನೀಡಿದ ಸಲಹೆಗಳನ್ನು ವಿಚಾರಣೆ ಮಾಡುವುದಕ್ಕೆ ನ್ಯಾಯಾಲಯಕ್ಕೂ ಅವಕಾಶವಿರತಕ್ಕದ್ದಲ್ಲ. ಸದರಿ ಅನುಚ್ಛೇದದ ಅಡಿಯಲ್ಲಿ ಮಂತ್ರಿಮಂಡಲ ಸಲಹೆಯ ಮೇಲೆ ಅದರಂತೆ ರಾಜ್ಯಪಾಲರು ತಮ್ಮ ಕರ್ತವ್ಯವನ್ನು ನಿರ್ವಹಿಸತಕ್ಕದ್ದು.

7. ಪ್ರಸ್ತುತ ರಿಟ್ ಅರ್ಜಿಯಲ್ಲಿ ಎತ್ತಲಾದ ಆಪಾದನೆಗಳು ಮತ್ತು ಕಾರಣಗಳು, ಮೇಲೆ ಹೇಳಲಾದ ನಾಮ ನಿರ್ದೇಶಿತ ಸದಸ್ಯರು ಹೊಂದಿರುವ ಅರ್ಹತೆ ಅಥವಾ ಪ್ರತ್ಯರ್ಜಿದಾರರ ನೆರವೇರಿಕೆಗಳು ಅಥವಾ ಭಾರತ ಸಂವಿಧಾನದ 171(3) ಅನುಚ್ಛೇದದಲ್ಲಿ ಹೇಳಲಾದ ಮಾನದಂಡಗಳೊಂದಿಗೆ ಅವನ್ನು ಹೋಲಿಕೆ ಮಾಡಿದಾಗ ರಿಟ್ ಅರ್ಜಿಯ ಕಾರಣಗಳು ಅಸ್ಪಷ್ಟವಾಗಿದೆ ಮತ್ತು ಬಹಳ ಸಂದಿಗ್ಧತೆಯಿಂದ ಕೂಡಿದೆ ಎಂಬುದು ಕಂಡು ಬರುತ್ತದೆ.

8. ಭಾರತ ಸಂವಿಧಾನದ 171(5)ನೇ ಅನುಚ್ಛೇದದ ಅಡಿಯಲ್ಲಿ ನಿರೂಪಿಸಲಾದ ಕ್ಷೇತ್ರಗಳನ್ನು ಪರಿಶೀಲನೆ ಮಾಡಲಾಗಿ, ಅಂಥ ವ್ಯಕ್ತಿಗಳು ಅವರ ಕ್ಷೇತ್ರಗಳಲ್ಲಿನ ಎಲ್ಲೆಯೊಳಗೆ ವ್ಯಾಪಕವಾದ ಮತ್ತು ಅಗಾಧವಾದ ಪರಿಜ್ಞಾನವನ್ನು ಪಡೆದವರಾಗಿರಬೇಕೆಂದು ನಿರೂಪಿಸಲಾಗಿದೆ. ಹಾಗೆಯೇ ತಮ್ಮ ಕ್ಷೇತ್ರದಲ್ಲಿ ಅಪಾರ ಜ್ಞಾನ ಹೊಂದಿರುವ ವ್ಯಕ್ತಿಗಳು ವಂಶಪಾರಂಪರ್ಯವಾಗಿ ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿದವರಾಗಿದ್ದು ಅದರ ಸದಸ್ಯತ್ವವನ್ನು ಹೊಂದಿದ್ದರೆ ಮತ್ತು ನಿರ್ದಿಷ್ಟ

ರಾಜಕೀಯ ಪಕ್ಷದ ಸದಸ್ಯರಾಗಿದ್ದರೆ ಅವರನ್ನು ಹೊರತುಪಡಿಸದೇ ರಾಜ್ಯಪಾಲರು ಆ ಕ್ಷೇತ್ರದಲ್ಲಿನ ವ್ಯಕ್ತಿಗಳನ್ನು ಭಾರತ ಸಂವಿಧಾನದ ಸದರಿ 171(5)ನೇ ಅನುಚ್ಛೇದದ ಅಡಿಯಲ್ಲಿ ನಾಮ ನಿರ್ದೇಶಿಸಬಹುದಾಗಿದೆ.

9. ಸಮಾಜದ ಅಂಥ ಚಟುವಟಿಕೆ ಕ್ಷೇತ್ರಗಳಂತಹ ಸಾಹಿತ್ಯ, ವಿಜ್ಞಾನ, ಕಲೆ ಮತ್ತು ಸಹಕಾರಿ ಚಳುವಳಿಗಳಲ್ಲಿ ತೊಡಗಿಸಿಕೊಂಡಿರುವ ವ್ಯಕ್ತಿಗಳು ರಾಜಕೀಯ ಪಕ್ಷದಲ್ಲಿ ಗುರುತಿಸಿಕೊಂಡಿದ್ದರೆ, ರಾಜಕೀಯ ಪಕ್ಷದಲ್ಲಿ ಗುರುತಿಸಿಕೊಂಡಿರುವರು ಎಂಬ ಕಾರಣ ಮಾತ್ರದಿಂದಲೇ ಅವರನ್ನು ಹೊರತುಪಡಿಸುವುದು ಅಥವಾ ಒಂದು ಅಥವಾ ಹೆಚ್ಚು ಕ್ಷೇತ್ರಗಳಲ್ಲಿ ಅವರು ಸೇರಿಲ್ಲವೆಂದು ಅವರನ್ನು ನಾಮನಿರ್ದೇಶನದಿಂದ ಹೊರತುಪಡಿಸಲು ಅವಕಾಶವಿರತಕ್ಕದ್ದಲ್ಲ. ಆದುದರಿಂದ ಈ ಕ್ಷೇತ್ರಗಳ ಯಾವುವೇ ವಿವರವಾದ ವಿಶ್ಲೇಷಣೆಯ ಸ್ವರೂಪವನ್ನು ಗಂಭೀರ ಪರಿಣಾಮಗಳ ಸ್ವರೂಪವನ್ನು ವಿಚಾರಣೆ ಮಾಡಲು ಮತ್ತು ಅಂಥ ರೀತಿಯ ವಿಚಾರಣೆಯನ್ನು ಈ ನ್ಯಾಯಾಲಯ ಕೈಗೊಳ್ಳಲು ಅಧಿಕಾರ ವ್ಯಾಪ್ತಿಯನ್ನು ಹೊಂದಿಲ್ಲವೆಂದು, ಈ ವಸ್ತು ವಿಷಯವನ್ನು ಭಾರತ ಸಂವಿಧಾನದ 226ನೇ ಅನುಚ್ಛೇದದ ಅಡಿಯಲ್ಲಿ ಈ ನ್ಯಾಯಾಲಯ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಬಾರದು ಎಂದು ನಿರ್ದಿಷ್ಟಪಡಿಸಿದೆ.

10. ಆದುದರಿಂದ, ಈ ವಸ್ತುವಿಷಯವನ್ನು ಭಾರತ ಸಂವಿಧಾನದ 163ನೇ ಅನುಚ್ಛೇದದ ಅಡಿಯಲ್ಲಿ ಅಧಿಕಾರ ವ್ಯಾಪ್ತಿಯನ್ನು ಮಾತ್ರವೇ ಪ್ರತಿಷೇಧಿಸಲಾಗಿಲ್ಲ ಪ್ರಸ್ತುತ ಅರ್ಜಿಗಳಲ್ಲಿ ಒತ್ತಾಯಪಡಿಸಲಾದ ವಿಚಾರಣೆ ಮಾಡುವುದನ್ನು ಸಹ ಪ್ರತಿಷೇಧಿಸಲಾಗಿದೆ. ಭಾರತ ಸಂವಿಧಾನದಲ್ಲಿ ಒಳಗೊಂಡಿರುವ ಮೇಲೆ ಹೇಳಲಾದ 163ನೇ ಅನುಚ್ಛೇದ ಉಪಬಂಧಗಳನ್ನು ಅವಲೋಕಿಸುವ ಮೂಲಕ ರಿಟ್ ಅರ್ಜಿಯನ್ನು ಸಾಧಾರಣವಾಗಿ ತಳ್ಳಿ ಹಾಕುವಂತಹ ಅರ್ಜಿಯಾಗಿದೆ.

11. ಪ್ರಸ್ತುತ ರಿಟ್ ಅರ್ಜಿದಾರರು ತಮ್ಮ ವೈಯಕ್ತಿಕ ಮತ್ತು ರಾಜಕೀಯ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳುವುದಕ್ಕಾಗಿ ಸಲ್ಲಿಸಿದ ಅರ್ಜಿಗಳಾಗಿದೆ ಎಂದು ಈ ನ್ಯಾಯಾಲಯ ಅಭಿಪ್ರಾಯಪಡುತ್ತದೆ ಮತ್ತು ಅರ್ಜಿದಾರರು ಈ ಸಂಬಂಧದಲ್ಲಿ ವಿಚಾರಣೆ ಮಾಡುವುದಕ್ಕಾಗಿ ಮಾತ್ರವೇ ಕೋರಿರದೇ ಈ ನ್ಯಾಯಾಲಯ ಹೊಂದಿರುವ

ವಿಶೇಷ ಅಧಿಕಾರ ವ್ಯಾಪ್ತಿಯ ಮೂಲಕ ಬಗೆಹರಿಸಲು ಕೋರಿರುತ್ತಾರೆ. ಇದು ಸಂವಿಧಾನಾತ್ಮಕವಾಗಿ ನಿಷೇಧವಾಗಿರುವುದು ಅಲ್ಲದೇ ಈ ನ್ಯಾಯಾಲಯಕ್ಕೆ ಇದು ಅಪರಿಚಿತವಾದ ಕ್ಷೇತ್ರದ ದಾವೆಯಾಗಿದೆ ಮತ್ತು ಭಾರತ ಸಂವಿಧಾನದ 171(5) ಅನುಚ್ಛೇದದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಕ್ಷೇತ್ರಗಳ ಪರಿಮಿತಿಯ ವ್ಯಾಪ್ತಿಯೊಳಗೆ ವಿಚಾರಣೆ ಮಾಡುವುದನ್ನು ಈ ನ್ಯಾಯಾಲಯಕ್ಕೆ ಪ್ರತಿರೋಧಿಸುವ ಸ್ವರೂಪದಲ್ಲಿ ಇರತಕ್ಕದ್ದು.

12. ಆದುದರಿಂದ, ಈ ನ್ಯಾಯಾಲಯದ ಅಭಿಪ್ರಾಯದಲ್ಲಿ ಪ್ರಸ್ತುತ ರಿಟ್ ಅರ್ಜಿಗಳು ಫಲಪ್ರದವಾಗಿಲ್ಲದಿರುವುದನ್ನು ಪರಿಗಣಿಸಿ ತದನುಸಾರವಾಗಿ ವಜಾಗೊಳ್ಳಲು ಅರ್ಹವಾದ ರಿಟ್ ಅರ್ಜಿಗಳಾಗಿದೆ.

13. ರಿಟ್ ಅರ್ಜಿಗಳನ್ನು ತದನುಸಾರವಾಗಿ ವಜಾ ಮಾಡಲಾಗಿದೆ. ಯಾವುದೇ ವೆಚ್ಚಗಳು ಇರುವುದಿಲ್ಲ.

---